# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ. ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 338

ಉತ್ತರ ದಿನಾಂಕ : 16.02.2023

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮದ್ದೂರು ತಾಲ್ಲೂಕಿನ ಕೆ. ಬೆಳ್ಳೂರು ಬಹುಗ್ರಾಮ ಕುಡಿಯುವ ನೀರು ಯೋಜನೆಯಿಂದ ಎಷ್ಟು ಗ್ರಾಮಗಳಿಗೆ ಅನುಕೂಲ ಆಗಲಿದೆ; ಈ ಯೋಜನೆಯ ಅಂದಾಜು ಮೊತ್ತ ಎಷ್ಟು; ಅನುಷ್ಠಾನಕ್ಕೆ ಕಾರ್ಯಾದೇಶ ನೀಡಿದ್ದು ಯಾವಾಗ; ಯೋಜನೆಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ ಏನು? | ಮದ್ದೂರು ತಾಲ್ಲೂಕಿನ ಕೆ. ಬೆಳ್ಳೂರು ಬಹುಗ್ರಾಮ ಕುಡಿಯುವ ನೀರು ಯೋಜನೆಯಿಂದ ಒಟ್ಟು 34 ಗ್ರಾಮಗಳಿಗೆ ಅನುಕೂಲ ಆಗಲಿದೆ. ಈ ಯೋಜನೆಯ ಅಂದಾಜು ಮೊತ್ತ ರೂ.566.25ಲಕ್ಷಗಳಾಗಿದ್ದು, ಯೋಜನೆಯ ಅನುಷ್ಠಾನಕ್ಕೆ ದಿನಾಂಕ:23-10-2008ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಹಾಗೂ ಯೋಜನೆಯನ್ನು ಪೂರ್ಣಗೊಳಿಸಲು 11 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. |
| ಆ) | ಮದ್ದೂರು ತಾಲ್ಲೂಕಿನ ಕೆ. ಬೆಳ್ಳೂರು ಬಹುಗ್ರಾಮ ಕುಡಿಯುವ ನೀರು ಯೋಜನೆಯ ಕಾಮಗಾರಿಯಡಿ ಇದುವರೆವಿಗೂ ಆಗಿರುವ ಕೆಲಸಗಳೇನು; ಬಾಕಿ ಉಳಿದಿರುವ ಕೆಲಸಗಳೇನು; ಕಾಮಗಾರಿ ಎಂದಿನಿಂದ ಸ್ಥಗಿತಗೊಂಡಿದೆ; ಸ್ಥಗಿತಗೊಳ್ಳಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ಸದರಿ ಯೋಜನೆಯಡಿ ಇದುವರೆಗೂ ಇನ್‌ಟೇಕ್‌ವೆಲ್, ಜಾಕ್‌ವೆಲ್, ಕಚ್ಚಾ ನೀರಿನ ಏರು ಕೊಳವೆ, ಏರೇಟರ್, ಸೆಡಿಮೆಂಟೇಶನ್ ಟ್ಯಾಂಕ್, ಪ್ಯೂರ್ ವಾಟರ್ ಸಂಪ್, ಶುದ್ಧೀಕರಿಸಿದ ನೀರಿನ ಏರು ಕೊಳವೆ ಹಾಗೂ ಲೈನ್ ಬೂಸ್ಟರ್ ಸಂಪ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಸ್ಲೋ ಸ್ಯಾಂಡ್ ಫಿಲ್ಟರ್ ಕಾಮಗಾರಿ ಬಾಕಿ ಉಳಿದಿರುತ್ತದೆ. ಯೋಜನೆಯನ್ನು ಶಿಂಷಾ ನದಿಗೆ ಅಡ್ಡವಾಗಿ ಕಟ್ಟಿರುವ ಇಗ್ಲೂರು ಬ್ಯಾರೇಜ್‌ನ ಹಿನ್ನೀರಿನ ಮೂಲವನ್ನು ಆಧಾರವಾಗಿಟ್ಟುಕೊಂಡು ರೂಪಿಸಲಾಗಿದ್ದು, 2016 ರಿಂದ 2019 ರವರೆಗೆ ರಾಜ್ಯದಲ್ಲಿ ಮಳೆಯ ಅಭಾವದಿಂದ ಸದರಿ ನೀರಿನ ಮೂಲ ಬತ್ತಿ ಹೋಗಿದ್ದ ಹಿನ್ನಲೆಯಲ್ಲಿ 2019 ರಿಂದ ಯೋಜನೆಯು ಸ್ಥಗಿತಗೊಂಡಿರುತ್ತದೆ. ಮುಂದುವರೆದು ಸದರಿ ಯೋಜನೆ ವ್ಯಾಪ್ತಿಯ ಗ್ರಾಮಗಳಲ್ಲಿ ವಿವಿಧ ಇಲಾಖೆಗಳಿಂದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವ ಕಾರಣದಿಂದ ಯೋಜನೆಯಡಿ ಅಳವಡಿಸಲಾಗಿದ್ದ ಪೈಪ್‌ಲೈನ್‌ಗಳು ಹಲವಾರು ಕಡೆ ಹಾನಿಗೆ ಒಳಗಾಗಿರುವುದರಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ. |

<table>
<tr><td>ಇ)</td><td>ಸದರಿ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು; ಯೋಜನೆಯ ಕಾಮಗಾರಿ ನಿರ್ವಹಿಸುತ್ತಿದ್ದ ಗುತ್ತಿಗೆದಾರರಿಗೆ ಎಷ್ಟು ಹಣವನ್ನು ಈವರೆವಿಗೂ ಪಾವತಿಸಲಾಗಿದೆ; ಎಷ್ಟು ಬಾಕಿ ಇದೆ; (ವರ್ಷವಾರು ವಿವರ ನೀಡುವುದು)</td><td>ಸದರಿ ಯೋಜನೆಗೆ ರೂ.615.56ಲಕ್ಷಗಳಷ್ಟು ಅನುದಾನ ಬಿಡುಗಡೆಯಾಗಿರುತ್ತದೆ. ಯೋಜನೆಯ ಗುತ್ತಿಗೆದಾರರಾದ ಮೆ॥ ಸ್ಕಿಲ್ ಟೆಕ್ ಎಂಜಿನೀಯರ್ಸ್ & ಕಾಂಟ್ರಾಕ್ಟರ್ಸ್ ಪ್ರೈ ಲಿ ಮೈಸೂರು ರವರಿಗೆ ರೂ.649.50ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದ್ದು, ಈ ಪೈಕಿ ಗುತ್ತಿಗೆದಾರರಿಗೆ ಇದುವರೆಗೂ ಒಟ್ಟು ರೂ.615.56ಲಕ್ಷಗಳು ಪಾವತಿಸಲಾಗಿರುತ್ತದೆ. ವರ್ಷವಾರು ಪಾವತಿ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ವರ್ಷ</th><th>ಪಾವತಿಸಲಾದ ಮೊತ್ತ (ರೂ. ಲಕ್ಷಗಳಲ್ಲಿ)</th><th>ಷರಾ</th></tr>
<tr><td>1.</td><td>2008-09 ರಿಂದ 2013-14</td><td>513.19</td><td>ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಪಾವತಿಸಲಾಗಿರುತ್ತದೆ</td></tr>
<tr><td>2.</td><td>2015-16</td><td>70.00</td><td rowspan="2">ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಪಾವತಿಸಲಾಗಿರುತ್ತದೆ</td></tr>
<tr><td>3.</td><td>2016-17</td><td>32.37</td></tr>
<tr><td></td><td>TOTAL</td><td>615.56</td><td></td></tr>
</table>
ಒಟ್ಟು ರೂ.33.44ಲಕ್ಷಗಳಷ್ಟು ಮೊತ್ತ ಪಾವತಿಸುವುದು ಬಾಕಿ ಇರುತ್ತದೆ.</td></tr>
<tr><td>ಈ)</td><td>ಸದರಿ ಯೋಜನೆಯ ವಿಳಂಬ ಅಥವಾ ಸ್ಥಗಿತಗೊಂಡಿರುವುದಕ್ಕೆ ಕಾರಣವಾದ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಶಿಸ್ತು ಕ್ರಮಗಳೇನು; (ವಿವರ ನೀಡುವುದು).</td><td>ಯೋಜನೆಯನ್ನು ಶಿಂಷಾ ನದಿಗೆ ಅಡ್ಡವಾಗಿ ಕಟ್ಟಿರುವ ಇಗ್ಗಲೂರು ಬ್ಯಾರೇಜ್‌ನ ಹಿನ್ನೀರಿನ ಮೂಲವನ್ನು ಆಧಾರವಾಗಿಟ್ಟುಕೊಂಡು ರೂಪಿಸಲಾಗಿದ್ದು 2016 ರಿಂದ 2019ರವರೆಗೆ ರಾಜ್ಯದಲ್ಲಿ ಮಳೆಯ ಅಭಾವದಿಂದ ನೀರಿನ ಮೂಲಗಳೆಲ್ಲ ಬತ್ತಿ ಹೋಗಿದ್ದ ಹಿನ್ನೆಲೆಯಲ್ಲಿ ಯೋಜನೆಯ ನೀರಿನ ಮೂಲದಲ್ಲಿಯೂ ಸಹ ನೀರಿನ ಅಭಾವ ಉಂಟಾಗಿ ಸ್ಥಗಿತಗೊಂಡಿರುತ್ತದೆ. ಮುಂದುವರೆದು ಸದರಿ ಯೋಜನೆ ವ್ಯಾಪ್ತಿಯ ಗ್ರಾಮಗಳಲ್ಲಿ ವಿವಿಧ ಇಲಾಖೆಗಳಿಂದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವ ಕಾರಣದಿಂದ ಯೋಜನೆಯಡಿ ಅಳವಡಿಸಲಾಗಿದ್ದ ಪೈಪ್‌ಲೈನ್‌ಗಳು ಹಲವಾರು ಕಡೆ ಹಾನಿಗೆ ಒಳಗಾಗಿರುವುದರಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಈ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. ಆದ್ದರಿಂದ ಅಧಿಕಾರಿಗಳ ವಿರುದ್ಧ ಯಾವುದೇ ಶಿಸ್ತು ಕ್ರಮಗಳನ್ನು ಜರುಗಿಸಿರುವುದಿಲ್ಲ.</td></tr>
<tr><td>ಉ)</td><td>ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೇ? (ವಿವರ ನೀಡುವುದು).</td><td>ಯೋಜನೆಯ ನೀರಿನ ಮೂಲ ಬತ್ತಿ ಹೋಗಿದ್ದ ಹಿನ್ನೆಲೆಯಲ್ಲಿ ಹಾಗೂ ಸದರಿ ಯೋಜನೆ ವ್ಯಾಪ್ತಿಯ ಗ್ರಾಮಗಳಲ್ಲಿ ವಿವಿಧ ಇಲಾಖೆಗಳಿಂದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವ ಕಾರಣದಿಂದ ಯೋಜನೆಯಡಿ ಅಳವಡಿಸಲಾಗಿದ್ದ ಪೈಪ್‌ಲೈನ್‌ಗಳು ಹಾನಿಗೆ ಒಳಗಾಗಿ ಯೋಜನೆಯು ಸ್ಥಗಿತಗೊಂಡಿರುವುದರಿಂದ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಲಾಗಿರುವುದಿಲ್ಲ.</td></tr>
</table>

ಸಂ:ಗ್ರಾಕುನೀ&ನೈಇ/15/ಅಧೀಕ್ಷಕರು-1/2023

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ